

بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ದಂಡಯಾತ್ರೆಗಳ ವಿವಿಧ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **09–05–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಮೋತ ಯುದ್ಧದ ಹೆಚ್ಚಿನ ವಿವರಣೆ ಹೀಗಿದೆ: ಹಝ್ರತ್ ಖಾಲಿದ್ ಬಿನ್ ವಲೀದ್[ರ] ವಿವರಿಸುತ್ತಾರೆ, ಮೋತದ ದಿನ ನನ್ನ ಕೈಯಲ್ಲಿ ಒಂಬತ್ತು ಖಡ್ಗಗಳು ಮುರಿದುಹೋದವು ಮತ್ತು ಕೇವಲ ಒಂದು ಅಗಲವಾದ ಯಮನಿ ಖಡ್ಗ ಮಾತ್ರ ನನ್ನ ಕೈಯಲ್ಲಿ ಉಳಿದಿತ್ತು. ಈ ವರದಿಯಿಂದ ಮುಸ್ಲಿಮರು ಮುಶ್ರಿಕರನ್ನು ಚೆನ್ನಾಗಿ ವಧಿಸಿದ್ದರು ಎಂದು ತಿಳಿದುಬರುತ್ತದೆ, ಇಲ್ಲದಿದ್ದರೆ ಅವರು ಮುಶ್ರಿಕರಿಂದ ಮುಕ್ತಿ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಮುಸ್ಲಿಮರ ಸಂಖ್ಯೆ ಮೂರು ಸಾವಿರ ಮತ್ತು ಮುಶ್ರಿಕರ ಸಂಖ್ಯೆ ಎರಡು ಲಕ್ಷಕ್ಕಿಂತ ಹೆಚ್ಚಿತ್ತು.

ಹಝ್ರತ್ ಮುಸ್ಲಿಹ್ ಮೌಊದ್[ರ] ಕೆಲವು ಸಮಸ್ಯೆಗಳನ್ನು ವಿವರಿಸುತ್ತಾ ಒಂದು ವಿವರಣೆಯಲ್ಲಿ ಹೇಳುತ್ತಾರೆ, ಕಷ್ಟಕರವಾದ ವಿಷಯಗಳನ್ನು ಕೆಲವರು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಕೆಲವರು ಅರ್ಥಮಾಡಿಕೊಳ್ಳುವುದಿಲ್ಲ. ಆದ್ದರಿಂದ ಇದರ ಬಗ್ಗೆ ಗೊತ್ತಿರುವವರು ಉಳಿದವರಿಗೆ ಆ ವಿಷಯಗಳನ್ನು ವಿವರಿಸಿಕೊಡಬೇಕು. ಏಕೆಂದರೆ ಅವರು ಸ್ವತಃ ಆಲೋಚಿಸುವುದಿಲ್ಲ ಅಥವಾ ಅವರ ಹೃದಯವು ಯಾವುದೇ ಪಾಪದ ಕಾರಣದಿಂದ ಅಲ್ಲಾಹನ ಕೃಪೆಯನ್ನು ಸ್ವೀಕರಿಸಲು ಸಿದ್ಧವಾಗಿರುವುದಿಲ್ಲ. ಸಾಮಾನ್ಯವಾಗಿ ಈ ಕಷ್ಟಕರವಾದ ವಿಷಯಗಳ ಎರಡು ವಿಧಗಳಿವೆ. ಒಂದು ಜ್ಞಾನಪರವಾದ ವಿಷಯಗಳು, ಅವು ಸೂಕ್ಷ್ಮ ತತ್ವಶಾಸ್ತ್ರವನ್ನು ಆಧರಿಸಿರುತ್ತವೆ, ಉದಾಹರಣೆಗೆ ತೌಹೀದ್ (ಏಕದೇವೋಪಾಸನೆ). ದೇವನು ಒಬ್ಬನೇ ಎಂಬ ಸಂಗತಿಯನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಬಹುದು, ಆದರೆ ಮನುಷ್ಯನ ಪ್ರತಿಯೊಂದು ಕ್ರಿಯೆಯ ಮೇಲೆ ಅಲ್ಲಾಹನ ತೌಹೀದ್‌ನ ಪರಿಣಾಮ ಹೇಗೆ ಬೀರುತ್ತದೆ ಎಂಬ ಸೂಕ್ಷ್ಮ ವಿಷಯಗಳಿಗೆ ಒಬ್ಬ ಜ್ಞಾನಿಯ ಅಗತ್ಯವಿರುತ್ತದೆ. ಈ ವಿಷಯಗಳನ್ನು ಇತರರಿಗೆ ವಿವರಿಸಲು ಒಬ್ಬ ವಿದ್ವಾಂಸನ ಅಗತ್ಯವಿರುತ್ತದೆ. ಪ್ರತಿಯೊಬ್ಬರಿಗೂ ಈ ಸೂಕ್ಷ್ಮತೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಆದರೆ ಪವಿತ್ರ ಖುರ್‌ಆನ್ ಅಲ್ಲಾಹನ ಹೊರತು ಇತರ ದೇವರು ಇರುವುದಾಗಿ ಅಂಗೀಕರಿಸುವುದಿಲ್ಲ ಎಂಬುದನ್ನು ಖಂಡಿತವಾಗಿಯೂ ಅವರು ಅರ್ಥಮಾಡಿಕೊಂಡಿರುತ್ತಾರೆ. ಎರಡನೆಯದಾಗಿ, ಜ್ಞಾನಪರವಲ್ಲದ ಆದರೆ ಉಪಮೆಯ ರೂಪದಲ್ಲಿ ವಿವರಿಸಲ್ಪಟ್ಟಿರುವ ವಿಷಯಗಳಿಗೆ ಸಂಬಂಧಿಸಿ ಈ ತೊಡಕುಗಳು ಉಂಟಾಗುತ್ತವೆ. ಸಾಮಾನ್ಯ ಜನರು ಉಪಮೆಯ ಭಾಷೆಯನ್ನು ತಿಳಿಯದ ಕಾರಣ, ಅದನ್ನು ಅವರು ವಾಸ್ತವಕ್ಕೆ ವಿರುದ್ಧವಾಗಿ ಅರ್ಥಮಾಡಿಕೊಳ್ಳುತ್ತಾರೆ. ಉದಾಹರಣೆಗೆ, ಹಝ್ರತ್ ಪೈಗಂಬರ್[ಸ]ರ ಕಾಲದಲ್ಲಿ ಒಂದು ಘಟನೆ ನಡೆಯಿತು. ಸಿರಿಯದ ಯುದ್ಧದಲ್ಲಿ ಹಝ್ರತ್ ಜಾಫರ್[ರ] ಹುತಾತ್ಮರಾದಾಗ ಜಾಫರ್‌ಗಾಗಿ ಅಳುವವರು ಯಾರೂ ಇಲ್ಲವೆಂದು ಹಝ್ರತ್ ಪೈಗಂಬರ್[ಸ] ಹೇಳಿದರು: ಜನರು ಹೋಗಿ ಅಳಬೇಕೆಂದು ಅದರ ಅರ್ಥವಾಗಿರಲಿಲ್ಲ. ಬದಲಾಗಿ ನಮ್ಮ ಸಹೋದರ ಕೂಡ ಕೊಲ್ಲಲ್ಪಟ್ಟನು ಮತ್ತು ನಾವು ಸಹನೆ ತೋರುತ್ತಿದ್ದೇವೆ ಎಂಬ ದುಃಖವನ್ನು ವ್ಯಕ್ತಪಡಿಸುವ ಒಂದು ರೀತಿಯಾಗಿತ್ತು. ಆದರೆ ಅನ್ಸಾರರು ಈ ಮಾತನ್ನು ಅಕ್ಷರಾರ್ಥದಲ್ಲಿ ತೆಗೆದುಕೊಂಡು ಮಹಿಳೆಯರನ್ನು ಹಝ್ರತ್ ಜಾಫರ್[ರ]ರ ಮನೆಗೆ ಕಳುಹಿಸಿದರು. ಅವರು ಅಲ್ಲಿ ಅಳಲು ಮತ್ತು ಗೋಳಾಡಲು ಪ್ರಾರಂಭಿಸಿದರು. ಇದರ ಬಗ್ಗೆ ಹಝ್ರತ್ ಪೈಗಂಬರ್[ಸ]ರಿಗೆ ತಿಳಿದಾಗ, 'ನನ್ನ ಉದ್ದೇಶ ಅದಾಗಿರಲಿಲ್ಲ' ಎಂದು ಅವರು ಹೇಳಿದರು. ಆಗ ಒಬ್ಬ ವ್ಯಕ್ತಿ ಹೋಗಿ ಅವರನ್ನು ಅಳುವುದರಿಂದ ತಡೆಯಲು ಪ್ರಯತ್ನಿಸಿದನು. ಅವನು ಹಝ್ರತ್ ಪೈಗಂಬರ್[ಸ]ರ ಬಳಿಗೆ ಹಿಂತಿರುಗಿ ಬಂದು 'ಅವರು ನನ್ನ ಮಾತನ್ನು ಕೇಳುತ್ತಿಲ್ಲ' ಎಂದು ತಿಳಿಸಿದನು. ಆಗ ಹಝ್ರತ್ ಪೈಗಂಬರ್[ಸ] ಹೇಳಿದರು, 'ಅವರ ತಲೆಗಳ ಮೇಲೆ ಮಣ್ಣು ಹಾಕು' ಅಂದರೆ ಅವರನ್ನು ಬಿಟ್ಟುಬಿಡು, ಅವರು ತಾವಾಗಿಯೇ ಮೌನವಾಗುವರು. ಆದರೆ ಒಬ್ಬ ವ್ಯಕ್ತಿ ಈ ಮಾತನ್ನು ಕೂಡ ಅದೇ ಅರ್ಥದಲ್ಲಿ ತೆಗೆದುಕೊಂಡು ನಿಜವಾಗಿಯೂ ಮಣ್ಣು ಹಾಕಲು ಪ್ರಾರಂಭಿಸಿದನು. ಆಗ 'ನೀನು ಮಾತನ್ನು ಅರ್ಥಮಾಡಿಕೊಂಡಿಲ್ಲ' ಎಂದು ಹೇಳಿ ಹಝ್ರತ್ ಆಯಿಶ[ರ] ಅವನನ್ನು ಗದರಿಸಿದರು.

ಅಲ್ಲಾಮಾ ಇಬ್ನು ಕಸೀರ್‌ರ ಪುಸ್ತಕವಾದ 'ಅಲ್–ಬಿದಾಯ ವನ್ನಿಹಾಯ'ದಲ್ಲಿ ಮೋತ ಯುದ್ಧದ ಹುತಾತ್ಮರ ಬಗ್ಗೆ ಪ್ರಸ್ತಾಪಿಸಿದ ನಂತರ, ಅವರ ಸಂಖ್ಯೆ ಹನ್ನೆರಡು ಎಂದು ಬರೆದಿದ್ದಾರೆ. ಕೆಲವು ವರದಿಗಳಲ್ಲಿ ಹುತಾತ್ಮರ ಸಂಖ್ಯೆ ಅದಕ್ಕಿಂತ ಹೆಚ್ಚಿತ್ತು ಎಂದು ವಿವರಿಸಲಾಗಿದೆ. ಹೇಗಿದ್ದರೂ ಇದು ಬಹಳ ದೊಡ್ಡ ಅದ್ಭುತ ಸಂಗತಿಯಾಗಿದೆ. ಏಕೆಂದರೆ ಎರಡು ಸೈನ್ಯಗಳು ಮುಖಾಮುಖಿಯಾಗಿದ್ದವು, ಒಂದು ಅಲ್ಲಾಹನ ಮಾರ್ಗದಲ್ಲಿ ಹೋರಾಡುತ್ತಿತ್ತು, ಅದರ ಸಂಖ್ಯೆ ಮೂರು ಸಾವಿರವಾಗಿತ್ತು. ಆದರೆ ವಿರೋಧಿ ಸೈನ್ಯದ ಸಂಖ್ಯೆ ಎರಡು ಲಕ್ಷವಾಗಿತ್ತು, ಆದರೂ ಮುಸ್ಲಿಮರಲ್ಲಿ ಕೇವಲ ಹನ್ನೆರಡು ಅಥವಾ ಕಡಿಮೆ ಸಂಖ್ಯೆಯ ಜನರು ಹುತಾತ್ಮರಾದರು ಮತ್ತು ಮುಶ್ರಿಕರಲ್ಲಿ ಅನೇಕರು ಕೊಲ್ಲಲ್ಪಟ್ಟರು.

ಮತ್ತೊಂದು ಕಾರ್ಯಾಚರಣೆಯ ಉಲ್ಲೇಖವಿದೆ. ಅದನ್ನು ಹಝ್ರತ್ ಅಮ್ರ್ ಬಿನ್ ಆಸ್[ರ]ರ ದಂಡಯಾತ್ರೆ ಎಂದು ಕರೆಯಲಾಗುತ್ತದೆ. ಈ ದಂಡಯಾತ್ರೆ ಜಮಾದಿಯುಸ್ಸಾನಿ ಹಿಜರೀ

8ರಲ್ಲಿ ನಡೆಯಿತು. ಇಬ್ನ್ ಇಸ್‌ಹಾಕ್ ಹೊರತುಪಡಿಸಿ ಎಲ್ಲರೂ ಇದು ಮೋತ ಯುದ್ಧದ ನಂತರ ನಡೆದಿತ್ತು ಎಂದು ಒಪ್ಪುತ್ತಾರೆ. ಮೋತ ಯುದ್ಧವು ಜಮಾದಿಯುಲ್ ಊಲಾ 8 ಹಿಜರಿಯಲ್ಲಿ ನಡೆದಿತ್ತು. ಈ ಕಾರ್ಯಾಚರಣೆಯ ಕಾರಣವೆಂದರೆ, ಬನೂ ಖುಝಾಅದ ಒಂದು ಗುಂಪು ಮದೀನದ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ದಾಳಿ ಮಾಡಲು ಒಟ್ಟುಗೂಡುತ್ತಿದೆ ಎಂದು ಹಝ್‌ರತ್ ಪೈಗಂಬರ್(ಸ)ರಿಗೆ ಸುದ್ದಿ ಸಿಕ್ಕಿತು. ಅವರನ್ನು ನಿಗ್ರಹಿಸಲು ಹಝ್‌ರತ್ ಪೈಗಂಬರ್(ಸ) ಹಝ್‌ರತ್ ಅಮ್ರ್ ಬಿನ್ ಆಸ್(ರ)ರನ್ನು ಕಳುಹಿಸಿದರು. ಮುಹಾಜಿರರು ಮತ್ತು ಅನ್ಸಾರರನ್ನು ಒಳಗೊಂಡ ಮುನ್ನೂರು ಜನರ ಸೈನ್ಯವನ್ನು ಅವರ ನಾಯಕತ್ವದಲ್ಲಿ ಹಝ್‌ರತ್ ಪೈಗಂಬರ್(ಸ) ಸಿದ್ಧಪಡಿಸಿದರು. ಸೇನೆಯಲ್ಲಿ ಮೂವತ್ತು ಕುದುರೆಸವಾರರಿದ್ದರು. ಹಝ್‌ರತ್ ಪೈಗಂಬರ್(ಸ) ಹಝ್‌ರತ್ ಅಮ್ರ್(ರ)ಗಾಗಿ ಒಂದು ಬಿಳಿ ಬಣ್ಣದ ಧ್ವಜವನ್ನು ಕಟ್ಟಿದರು ಮತ್ತು ಕಪ್ಪು ಬಣ್ಣದ ಒಂದು ಧ್ವಜವನ್ನೂ ನೀಡಿದರು. ಅವರು ಯುದ್ಧದಲ್ಲಿ ವಿಶೇಷ ಕೌಶಲ್ಯವನ್ನು ಹೊಂದಿದ್ದರು ಮತ್ತು ಯುದ್ಧ ಕಲೆಗಳ ಬಗ್ಗೆಯೂ ತಿಳಿದಿದ್ದರು. ಅವರ ಯುದ್ಧ ಕೌಶಲ್ಯದಿಂದಾಗಿ ಅವರನ್ನು ಹಝ್‌ರತ್ ಪೈಗಂಬರ್(ಸ) ಸೇನಾಧಿಪತಿಯನ್ನಾಗಿ ನೇಮಿಸಿದ್ದರು.

ಇಸ್ಲಾಮಿನ ಸೈನ್ಯ ಹೊರಟಿತು. ಅದು ರಾತ್ರಿಯಲ್ಲಿ ಪ್ರಯಾಣಿಸುತ್ತಿತ್ತು ಮತ್ತು ಹಗಲಿನಲ್ಲಿ ಅಡಗಿಕೊಳ್ಳುತ್ತಿತ್ತು. ಕೊನೆಗೆ ಅದು ಜಝಾಮ್ ಗೋತ್ರದ ಪ್ರದೇಶದಲ್ಲಿ ಸಲಾಸಿಲ್ ಎಂಬ ಒಂದು ಕಾರಂಜಿಯ ಬಳಿ ತಲುಪಿತು. ಈ ಕಾರಣದಿಂದ ಇದನ್ನು ಝಾತುಲ್ ಸಲಾಸಿಲ್ ಎಂದೂ ಕರೆಯಲಾಗುತ್ತದೆ. ಬುಗ್ಗೆಯ ಬಳಿ ತಲುಪಿದಾಗ ಶತ್ರು ಸೈನ್ಯವು ಬಹಳ ದೊಡ್ಡದಾಗಿದೆ ಎಂದು ಮುಸ್ಲಿಮರಿಗೆ ತಿಳಿಯಿತು. ಹಝ್‌ರತ್ ಅಮ್ರ್(ರ) ಹೆಚ್ಚಿನ ಸಹಾಯಕ್ಕಾಗಿ ಹಝ್‌ರತ್ ರಾಫೀ ಬಿನ್ ಮುಕೀಸ್(ರ)ರನ್ನು ಹಝ್‌ರತ್ ಪೈಗಂಬರ್(ಸ)ರ ಬಳಿಗೆ ಕಳುಹಿಸಿದರು. ಹಝ್‌ರತ್ ಪೈಗಂಬರ್(ಸ) ಹಝ್‌ರತ್ ಅಬೂ ಉಬೈದ ಬಿನ್ ಜರ್‍ರಾಹ್(ರ)ರಿಗಾಗಿ ಧ್ವಜವನ್ನು ಸಿದ್ಧಪಡಿಸಿದರು ಮತ್ತು ಇನ್ನೂರು ಮುಹಾಜಿರರ ಮತ್ತು ಅನ್ಸಾರರ ಸೈನ್ಯವನ್ನು ಅವರೊಂದಿಗೆ ಕಳುಹಿಸಿದರು. ಹಝ್‌ರತ್ ಅಬೂಬಕರ್(ರ) ಮತ್ತು ಹಝ್‌ರತ್ ಉಮರ್(ರ) ಸಹ ಅದರಲ್ಲಿ ಸೇರಿದ್ದರು. ತಲುಪಿದ ನಂತರ ಹಝ್‌ರತ್ ಅಮ್ರ್‌ರೊಂದಿಗೆ ಸೇರಿಕೊಳ್ಳಬೇಕೆಂದೂ ಒಂದೇ ಸೈನ್ಯವಾಗಿರಬೇಕೆಂದೂ ಪರಸ್ಪರ ಭಿನ್ನತೆ ಉಂಟಾಗಬಾರದೆಂದೂ ಹಝ್‌ರತ್ ಅಬೂ ಉಬೈದ(ರ)ರನ್ನು ಕಳುಹಿಸುವಾಗ ಹಝ್‌ರತ್ ಪೈಗಂಬರ್(ಸ) ಉಪದೇಶ ನೀಡಿದರು.

ಹೇಗಿದ್ದರೂ ಮುಸ್ಲಿಮರು ಅಲ್ಲಿಂದ ಹೊರಟು ಶತ್ರುಗಳ ಪ್ರದೇಶವನ್ನು ಪ್ರವೇಶಿಸಿ ಅವರನ್ನು ಸುತ್ತುವರಿದು ವಿಜಯ ಸಾಧಿಸಿದರು ಎಂದು ಬರೆಯಲಾಗಿದೆ. ಶತ್ರುಗಳು ಇರುವ ಸ್ಥಳವನ್ನು ಮುಸ್ಲಿಮರು ತಲುಪಿದಾಗ, ಶತ್ರುಗಳು ಮುಸ್ಲಿಮರ ಆಗಮನದ ಸುದ್ದಿಯನ್ನು ತಿಳಿದು ಓಡಿ ಚದುರಿಹೋದರು. ಮುಸ್ಲಿಮರು ಅವರನ್ನು ಹಿಂಬಾಲಿಸಿದಾಗ, ಶತ್ರುಗಳ ಒಂದು ಸಣ್ಣ ಗುಂಪಿನೊಂದಿಗೆ ಹೋರಾಟ ನಡೆಯಿತು. ಮುಸ್ಲಿಮರು ಅವರ ಮೇಲೆ ದಾಳಿ ಮಾಡಿ ಅವರನ್ನು ಸೋಲಿಸಿದರು. ಉಳಿದವರೆಲ್ಲರೂ ಓಡಿಹೋದರು.

ಮತ್ತೊಂದು ಹಝ್‌ರತ್ ಅಬೂ ಉಬೈದಾ ಬಿನ್ ಜರ್‍ರಾಹ್(ರ)ರ ದಂಡಯಾತ್ರೆಯಾಗಿದೆ. ಈ ದಂಡಯಾತ್ರೆ ರಜಬ್ 8 ಹಿಜರಿಯಲ್ಲಿ ನಡೆಯಿತು. ಇದಕ್ಕೆ ಇತರ ಹೆಸರುಗಳೂ ಇವೆ. ಇದನ್ನು ಸರಿಯ ಸೀಫುಲ್–ಬಹ್ರ್ ಎಂದೂ ಕರೆಯಲಾಗುತ್ತದೆ. ಸೀಫುಲ್–ಬಹ್ರ್ ಎಂದರೆ ಸಮುದ್ರ ತೀರ ಎಂದಾಗಿದೆ. ಈ ಸರಿಯದಲ್ಲಿ ಸಹಾಬಿಯರು(ರ) ಕೆಂಪು ಸಮುದ್ರ ತೀರಕ್ಕೆ ಹೋಗಿ ನೆಲೆಸಿದ್ದರಿಂದ ಇದನ್ನು ಸರಿಯ ಸೀಫುಲ್–ಬಹ್ರ್ ಎಂದು ಕರೆಯಲಾಗುತ್ತದೆ. ಈ ಸೈನ್ಯವನ್ನು ಎಲೆಗಳನ್ನು ತಿಂದ ಸೈನ್ಯ ಎಂದೂ ಕರೆಯಲಾಗುವುದಕ್ಕೆ ಕಾರಣವೇನೆಂದರೆ ಈ ಸರಿಯದ ಒಂದು ಹಂತದಲ್ಲಿ ಸಹಾಬಿಯರಿಗೆ ಮರಗಳ ಎಲೆಗಳನ್ನು ತಿನ್ನಬೇಕಾದ ಸ್ಥಿತಿ ಉಂಟಾಗಿತ್ತು. ಈ ದಂಡಯಾತ್ರೆಯ ನಾಯಕ ಹಝ್‌ರತ್ ಅಬೂ ಉಬೈದಾ ಬಿನ್ ಜರ್‍ರಾಹ್(ರ) ಆಗಿದ್ದರು. ಹಝ್‌ರತ್ ಪೈಗಂಬರ್(ಸ) ಮುನ್ನೂರು ಮುಹಾಜಿರ್ ಮತ್ತು ಅನ್ಸಾರ್ ಸಹಾಬಿಯರ(ರ) ಒಂದು ಸೈನ್ಯವನ್ನು ಅವರಿಗೆ ನೀಡಿ ಬನೂ ಜುಹೈನದ ಒಂದು ಗುಂಪಿನ ಕಡೆಗೆ ಕಳುಹಿಸಿದರು. ಹಝ್‌ರತ್ ಉಮರ್(ರ) ಸಹ ಈ ಸೈನ್ಯದಲ್ಲಿದ್ದರು. ಈ ದಂಡೆಯಾತ್ರೆಯ ಉದ್ದೇಶವನ್ನು ಹೀಗೆ ವಿವರಿಸಲಾಗಿದೆ: ಮಕ್ಕದ ಖುರೈಷಿಗಳ ಒಂದು ವ್ಯಾಪಾರಿ ತಂಡವು ಧಾನ್ಯವನ್ನು ಹೊತ್ತು ಸಮುದ್ರ ತೀರದ ಮೂಲಕ ಸಿರಿಯದಿಂದ ಮಕ್ಕದ ಕಡೆಗೆ ಹೋಗುತ್ತಿತ್ತು. ಅದರ ಮೇಲೆ ಜುಹೈನ ಗೋತ್ರದಿಂದ ದಾಳಿಯ ಸಾಧ್ಯತೆಯಿತ್ತು. ಅದು ಹುದೈಬಿಯಾದ ಒಪ್ಪಂದದ ಸಮಯವಾಗಿತ್ತು ಮತ್ತು ಜುಹೈನ ಗೋತ್ರ ಹಝ್‌ರತ್ ಪೈಗಂಬರ್(ಸ)ರ ಮಿತ್ರಪಕ್ಷ ಆಗಿರುವುದರಿಂದ, ಹಝ್‌ರತ್ ಪೈಗಂಬರ್(ಸ) ದೂರದೃಷ್ಟಿಯಿಂದ ಮುನ್ನೆಚ್ಚರಿಕೆಯಾಗಿ ಒಂದು ರಕ್ಷಣಾ ತಂಡವನ್ನು ಅವರ ಕಡೆಗೆ ಕಳುಹಿಸಿದರು. ಸಿರಿಯದಿಂದ ಬರುವ ಖುರೈಷಿ ವ್ಯಾಪಾರಿ ತಂಡಕ್ಕೆ ತೊಂದರೆಯಾಗಬಾರದು ಮತ್ತು ಖುರೈಷಿಗಳಿಗೆ ಶಾಂತಿಭಂಗ ಮತ್ತು ಒಪ್ಪಂದ ಉಲ್ಲಂಘನೆಯ ನೆಪ ಸಿಗಬಾರದು ಎಂಬುದು ಇದರ ಉದ್ದೇಶವಾಗಿತ್ತು. ಇದರಿಂದ ಈ ಸಹಾಬಿಯರು ಯಾರೊಂದಿಗೂ ಹೋರಾಡಲು ಹೋಗಿರಲಿಲ್ಲ ಎಂದು ಸ್ಪಷ್ಟವಾಗುತ್ತದೆ. ಹದಿನೈದು ದಿನಗಳಿಗಿಂತ ಹೆಚ್ಚು ಕಾಲ ತಂಗಿಯೂ ಅಲ್ಲಿ ಯಾವುದೇ ಹೋರಾಟ ನಡೆದ ಉಲ್ಲೇಖ ಲಭಿಸುವುದಿಲ್ಲ.

(ಹುಝೂರ್ ಹೇಳಿದರು:) ಪಾಕಿಸ್ತಾನ ಮತ್ತು ಭಾರತದ ನಡುವಿನ ಯುದ್ಧದ ಪರಿಸ್ಥಿತಿಯ ಬಗ್ಗೆ ಬಹಳಷ್ಟು ದುಆ ಮಾಡಿರಿ. ಪರಸ್ಪರ ಶಾಂತಿ ಮತ್ತು ಸೌಹಾರ್ದತೆಯ ವಾತಾವರಣ ನೆಲೆಗೊಳ್ಳಲಿ, ಏಕೆಂದರೆ ಇಂದಿನ ಯುದ್ಧಗಳಲ್ಲಿ ಬಳಸುವ ಅಸ್ತ್ರಗಳಿಂದ ನಾಗರಿಕರು ಕೂಡ ಸಾಯುತ್ತಾರೆ, ಸಾಯುತ್ತಿದ್ದಾರೆ. ಈಗಿನ ಯುದ್ಧದ ಸ್ವರೂಪವೇ ಬದಲಾಗಿದೆ.

ಎರಡೂ ಕಡೆಯವರು ಶಾಂತಿಗೆ ಒಪ್ಪಿಕೊಳ್ಳಲಿ ಮತ್ತು ದೊಡ್ಡ ನಷ್ಟದಿಂದ ಪಾರಾಗಲಿ ಎಂದು ದುಆ ಮಾಡಬೇಕು. ಈ ಸಂಬಂಧವಾಗಿ ನೆನಪಿಡಬೇಕಾದ ಮತ್ತೊಂದು ಸಂಗತಿಯೇನೆಂದರೆ, ಇಂದು ಸಾಮಾಜಿಕ ಮಾಧ್ಯಮದಲ್ಲಿ ಅಥವಾ ಅಂತರ್ಜಾಲದ ಇತರ ಮಾಧ್ಯಮಗಳಲ್ಲಿ, ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ, ಮೆಸೇಜ್‌ಗಳ ಮೂಲಕ ಪ್ರತಿಯೊಬ್ಬರೂ ಬಹಳ

ಮುಕ್ತವಾಗಿ ಪ್ರತಿಕ್ರಿಯಿಸುತ್ತಾರೆ ಮತ್ತು ತಮಗೆ ಇಷ್ಟಬಂದಂತೆ ಹೇಳುತ್ತಾರೆ. ಇದರಿಂದ ಲಾಭ ಕಡಿಮೆ, ನಷ್ಟ ಹೆಚ್ಚು. ನಾವು ಏನನ್ನು ಬಯಸುತ್ತಿದ್ದೇವೆ ಎಂಬುದರ ಬಗ್ಗೆ ಸಂದೇಶಗಳ ಮೂಲಕ ದೊಡ್ಡ ಅಭಿಪ್ರಾಯಗಳನ್ನು ನೀಡಲಾಗುತ್ತಿವೆ. ಅಹ್ಮದಿಯರು ಇದರಿಂದ ದೂರವಿರಬೇಕು. ಏಕೆಂದರೆ ಈ ಅಭಿಪ್ರಾಯಗಳಿಂದ ಲಾಭ ಕಡಿಮೆ, ನಷ್ಟ ಹೆಚ್ಚು. ಯಾರಿಗಾದರೂ ಸಂದೇಶವನ್ನು ತಲುಪಿಸಲು ಬಹಳ ಆಸೆಯಿದ್ದರೆ, ಶಾಂತಿ ಮತ್ತು ಮೈತ್ರಿಯ ಸಂದೇಶವನ್ನು ನೀಡಿ.

ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಜೀವಿತದ ಕೊನೆಯಲ್ಲಿ ರಚಿಸಿದ **'ಮೈತ್ರಿ ಸಂದೇಶ'**ದಲ್ಲಿಯೂ ಇದೇ ಸಂದೇಶವನ್ನು ನೀಡಿದ್ದರು. ಅದು ಶಾಂತಿ ಮತ್ತು ಮೈತ್ರಿಯ ಸಂದೇಶವಾಗಿತ್ತು. ಆದ್ದರಿಂದ ಪ್ರತಿಯೊಬ್ಬ ಅಹ್ಮದಿಯೂ ಅದನ್ನು ನೆನಪಿಟ್ಟುಕೊಳ್ಳಬೇಕು ಮತ್ತು ಅದಕ್ಕಾಗಿ ಪ್ರಯತ್ನಿಸಬೇಕು. ಅಲ್ಲಾಹನು ಎಲ್ಲ ಅಮಾಯಕರನ್ನು ರಕ್ಷಿಸಲಿ. ಕೆಲವು ಶಕ್ತಿಶಾಲಿ ದೇಶಗಳು ಯುದ್ಧವನ್ನು ಪ್ರಚೋದಿಸಲು ಪ್ರಯತ್ನಿಸುತ್ತಿವೆ ಎಂದು ತೋರುತ್ತಿದೆ. ಎರಡೂ ದೇಶಗಳು ಹೋರಾಡಿ ದುರ್ಬಲವಾಗಲಿ ಮತ್ತು ತಮ್ಮ ಆಯುಧಗಳು ಮಾರಾಟವಾಗಲಿ ಎಂದು ಅವರು ಬಯಸುತ್ತಾರೆ. ಅಲ್ಲಾಹನು ಅವರ ಕೆಡುಕಿನಿಂದಲೂ ರಕ್ಷಿಸಲಿ. ಅಂತೆಯೇ ಮಧ್ಯಪ್ರಾಚ್ಯದ ಜನರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರ ಕಷ್ಟಗಳನ್ನು ದೂರಮಾಡಲಿ. ಅವರು ಶಾಂತಿಯಿಂದ ತಮ್ಮ ದೇಶದಲ್ಲಿ ವಾಸಿಸುವಂತಾಗಲಿ. ಆದರೆ ಶಾಂತಿಯ ಯಾವುದೇ ಸಾಧ್ಯತೆ ತೋರುತ್ತಿಲ್ಲ. ಹೇಗಾದರೂ ಅವರನ್ನು ಅಲ್ಲಿಂದ ಹೊರಹಾಕಲು ಪ್ರಯತ್ನಿಸಲಾಗುತ್ತಿದೆ. ಎಲ್ಲ ದೊಡ್ಡ ರಾಷ್ಟ್ರಗಳು ಇದರಲ್ಲಿ ಸೇರಿಕೊಳ್ಳುತ್ತಿವೆ. ಮುಸ್ಲಿಂ ದೇಶಗಳಿಗೆ ಅಲ್ಲಾಹನು ಬುದ್ಧಿ ನೀಡಲಿ ಮತ್ತು ಅವರು ಒಂದಾಗಲಿ. ಅವರು ಒಂದಾದರೆ ಅನೇಕ ಸಮಸ್ಯೆಗಳು ಬಗೆಹರಿಯಬಹುದು.

ಜಾಗತಿಕ ಯುದ್ಧ ಸಂಭವಿಸಿದರೆ, ನಾವು ಪಾರಾಗುವೆವು ಎಂಬುದು ಕೆಲವು ಜನರ ಮತ್ತು ಕೆಲವು ದೇಶಗಳ ತಪ್ಪು ಕಲ್ಪನೆಯಾಗಿದೆ. ಅದು ಎಲ್ಲರನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುವುದು. ಆದ್ದರಿಂದ ಪ್ರತಿಯೊಬ್ಬರೂ ಈ ತಪ್ಪು ಕಲ್ಪನೆಯಿಂದ ದೂರವಿರಬೇಕು. ಅಲ್ಲಾಹನು ಎಲ್ಲರನ್ನೂ ರಕ್ಷಿಸಲಿ. ಹೇಗಿದ್ದರೂ ನಾನು ಯಾವಾಗಲೂ ಹೇಳುವಂತೆ, ಅಲ್ಲಾಹನ ಮುಂದೆ ಬಾಗುವುದು ಮಾತ್ರವೇ ಇದಕ್ಕಿರುವ ಪರಿಹಾರವಾಗಿದೆ. ಅವರನ್ನು ರಕ್ಷಿಸಬಲ್ಲ ಏಕೈಕ ಮಾರ್ಗ ಇದೇ ಆಗಿದೆ. ಅದರ ಹೊರತಾಗಿ ಬೇರೆ ಯಾವುದೇ ಮಾರ್ಗವಿಲ್ಲ. ಅಲ್ಲಾಹನು ಎಲ್ಲರಿಗೂ ಅದರ ಸೌಭಾಗ್ಯ ನೀಡಲಿ.

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَاْمُرُ بِالْعَدْلِ وَالْاِحْسَانِ وَاِیْتَآءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ○ اُذْکُرُوااللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ.


***Friday Sermon delivered by Hadrath Khaleefatul Masih Al Khamis(atba)***

At, ***'Masjid Mubarak',*** *Islamabad, Tilford,* U.K. On 09-05-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email****:* *khutuba.kannada@gmail.com*

**You can find all the Sermons archived at**: www.alislam.org/friday-sermon